<u>ಇಂದು ದಿನಾಂಕಃ **15.02.2021** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.</u>

<u>ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ</u> ನನ್ನ ಹೆಸರು ಮಹದೇಶಚಾರ್. ನನ್ನ ತಂದೆಯ ಹೆಸರು ಪುಟ್ಟಾಚಾರಿ. ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ. ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ. ಸಹಿ ಮಾತ್ರ ಮಾಡುತ್ತೇನೆ ಕಾರ್ಪೆಂಟರ್ ಕೆಲಸ ಮಾಡುತ್ತೇನೆ. ದಾವೆಯನ್ನು ಯಾರು ಯಾರ ವಿರುದ್ಧ ಸಲ್ಲಿಸಿದ್ದಾರೆಂದು ಕೇಳಿ ತಿಳಿದುಕೊಂಡಿದ್ದೀರ ಎಂದರೆ ತಿಳಿದುಕೊಂಡಿರುತ್ತೇನೆ. ದಾವಾ ಸ್ವತ್ತಿನ ನಂ. **30/2** ಆಗಿರುತ್ತದೆ. ವಾದಿ ಸಲ್ಲಿಸಿರುವ ದಾವಾಸ್ತಿಯ ನಂಬರ್ ಮತ್ತು ವಿಸ್ತೀರ್ಣವನ್ನು ಹೇಳಲು ಆಗುತ್ತದೆಯೇ ಎಂದರೆ ಆಗುವುದಿಲ್ಲ. ನನ್ನ ಮುಖ್ಯವಿಚಾರಣ ಪ್ರಮಾಣ ಪತ್ರದಲ್ಲಿರುವ ವಿಚಾರಗಳು ನನಗೆ ಗೊತ್ತಿಲ್ಲ ಎಂದರೆ ಸರಿ. **1** ನೇ ಪ್ರತಿವಾದಿ, ಇನ್ನೊಬ್ಬರು ಹಾಗೂ ಮಹದೇವರವರು ಸಲ್ಲಿಸಿದ್ದಾರೆಂದು ಹೇಳುವ **64** ದಾಖಲೆಗಳನ್ನು ನೋಡಿದ್ದೀರ ಎಂದರೆ ನೋಡಿರುವುದಿಲ್ಲ. ಕ್ರ.ಸಂ. **31** ರಲ್ಲಿ **5** ಹಿಸ್ಸೆಗಳು ಆಗಿವೆ ಎಂದು ಮುಖ್ಯವಿಚಾರಣ ಪ್ರಮಾಣ ಪತ್ರದಲ್ಲಿ ನಮೂದು ಮಾಡಿದ್ದು ಅದರ ಸಂಖ್ಯೆಗಳನ್ನು ಹೇಳಲು ಆಗುತ್ತದೆಯೇ ಎಂದರೆ ಆಗುವುದಿಲ್ಲ. ಸದರಿ **5** ಹಿಸ್ಸೆಗಳನ್ನು ನ್ಯಾಕ್ಕೆ ತೊಂದರೆ ಇಲ್ಲ ಎಂದರೆ ಸರಿಯಲ್ಲ. **5** ಹಿಸ್ಸೆಗಳಿಗೆ ಸಂಬಂಧಿಸಿದಂತೆ ದಾಖಲೆಗಳನ್ನು ನಾನು ನೋಡಿಲ್ಲ ಎಂದರೆ ಸರಿ. ಪ್ರಸ್ತುತ ದಾವೆಯ ವಿಚಾರದ ಬಗ್ಗೆ ಗೊತ್ತಿಲ್ಲ ಎಂದರೆ ಸರಿ. **5** ಹಿಸ್ಸೆಗಳನ್ನು ಸಿದ್ದಾಚಾರ್ ರವರು ಬೆಟ್ಟಾಚಾರ್ ರವರಿಗೆ ಮಾರಾಟ ಮಾಡಿದ್ದಾರೆ ಎಂದು ಹೇಳುವ ಮತ್ತು ಬೆಟ್ಟಾಚಾರ್ ರವರು ಪುಟ್ಟಬಸಪ್ಪಾಚಾರ್ ರವರಿಗೆ ಮಾರಾಟ ಮಾಡಿದ್ದಾರೆ ಎಂದು ಹೇಳುವ ಕ್ರಯ ಪತ್ರಗಳನ್ನು ನೋಡಿದ್ದೀರ ಎಂದರೆ ನೋಡಿರುವುದಿಲ್ಲ. **40** ವರ್ಷಗಳ ಮಾಲೀಕತ್ವದ ಮತ್ತು ಕಂದಾಯದ ದಾಖಲೆಗಳನ್ನು ನ್ಯಾಕ್ಕೆ ಹಾಜರುಪಡಿಸಲು ತೊಂದರೆ ಇದೆಯೇ ಎಂದರೆ ಈಗಾಗಲೇ ನ್ಯಾಕ್ಕೆ ಹಾಜರುಪಡಿಸಲಾಗಿದೆ.

ನ್ಯಾಯಾಲಯಕ್ಕೆ ಯಾವ ಯಾವ ದಾಖಲೆಗಳನ್ನು ಸಲ್ಲಿಸಲಾಗಿದೆ ಎಂದರೆ ಎರಡು ದಾವೆಯ ಮೂಲ ದಾಖಲೆಗಳನ್ನು ಸಲ್ಲಿಸಲಾಗಿದೆ. ದಾವೆಗಾಗಿ ಸೃಷ್ಟಿಮಾಡಿಕೊಂಡು ದಾಖಲೆಗಳನ್ನು ಹಾಜರು ಮಾಡಲಾಗಿದೆ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಆರ್.ಎ **133/2009** ರ ತೀರ್ಪಿನ ದೃಢೀಕೃತ ನಕಲನ್ನು ಮಾತ್ರ ನಿಡಿ **61** ರಂತೆ ಹಾಜರು ಮಾಡಿದ್ದು, ಬೇರೆ ಯಾವುದೇ ದಾಖಲೆಗಳನ್ನು ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ. ಸದರಿ ಮೇಲ್ಮನವಿಯಲ್ಲಿ ನಾನಾಗಲೀ ನನ್ನ ತಂದೆಯಾಗಲೀ ಪಕ್ಷಗಾರರಲ್ಲ ಎಂದರೆ ಸರಿಯಲ್ಲ. ಸಿದ್ದಾಚಾರಿಯವರು ಏನಾಗಬೇಕು ಎಂದರೆ ಏನು ಇಲ್ಲ. ಸಿದ್ದಾಚಾರ್ ರವರ ತಂದೆಯ ಹೆಸರು ಏನು ಎಂದರೆ

ಗೊತ್ತಿಲ್ಲ. ಅವರ ತಂದೆಯ ಹೆಸರು ದೊಡ್ಡತಮ್ಮಯ್ಯಚಾರಿ ಎಂದರೆ ಸರಿ. ಸದರಿಯವರಿಗೆ ಬಿಳಿಕೆರೆ ಗ್ರಾಮದಲ್ಲಿ ಮೂರು ಆಸ್ತಿಗಳಿದ್ದವು ಎಂದರೆ ಗೊತ್ತಿಲ್ಲ. ಹೌಸ್ ಲೀಸ್ಟ್ ನಂ. **30/2, 31/1** ವಾದಿಗಳ ತಂದೆ ಸಿದ್ದಾಚಾರ್ ರವರಿಗೆ ಸೇರಿರುತ್ತದೆ ಎಂದರೆ ಸರಿ. ಹೌಸ್ ಲೀಸ್ಟ್ ನಂ. **31/2** ಸಹ ಸಿದ್ದಾಚಾರ್ ರವರಿಗೆ ಸೇರಿರುತ್ತದೆ ಎಂದರೆ ಗೊತ್ತಿಲ್ಲ. ನಮ್ಮ ಊರಿನಲ್ಲಿ ಪಂಚಾಯಿತಿ ಬರುವ ಮುಂಚೆ ಪಟೇಲರು ಮತ್ತು ಶಾನುಭೋಗರು ಇದ್ದರು ಎಂದರೆ ಸರಿ. ಸದರಿಯವರುಗಳು ಗ್ರಾಮದ ಸ್ವತ್ತುಗಳು ಯಾರುಯಾರಿಗೆ ಸೇರಿರುತ್ತವೆ ಎಂದು ಲೆಡ್ಜರ್ ನಲ್ಲಿ ನಮೂದು ಮಾಡುತ್ತಿದ್ದರು ಎಂದರೆ ಗೊತ್ತಿಲ್ಲ. ಹೌಸ್ ಲೀಸ್ಟ್ ನಂ. **30/2** ರಲ್ಲಿ ಸಿದ್ದಾಚರ್ ರವರಿಗೆ **22*16** ಗಜ ಆಸ್ತಿ ಇತ್ತು ಎಂದರೆ ಸರಿ. ಹೌಸ್ ಲೀಸ್ಟ್ ನಂ. **31/1** ರಲ್ಲಿ ಸಿದ್ದಾಚಾರ್ ರವರಿಗೆ **33*16 1/2** ಗಜ ಇತ್ತು ಎಂದರೆ ಗೊತಿಲ್ಲ. ಹೌಸ್ ಲೀಸ್ಟ್ ನಂ. **31/2** ರಲ್ಲಿ ಸಿದ್ದಾಚರ್ ರವರಿಗೆ **33*16 1/2** ಗಜ ಆಸ್ತಿ ಇತ್ತು ಎಂದರೆ ಸರಿ. ನಾನು, ಗಂಗಾಧರಚಾರಿ ಮತ್ತು ಮಹದೇವರವರು ವಾದಿಗಳ ಆಸ್ತಿಯನ್ನು ಲಪಟಾಯಿಸಬೇಕೆಂಬ ಉದ್ದೇಶದಿಂದ ಕಾನೂನುಬಾಹಿರ ಕೃತ್ಯದಲ್ಲಿ ತೊಡಗಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ತಾತ ಪುಟ್ಟಬಸವಾಚಾರಿಯವರು ಬೆಟ್ಟಾಚಾರ್ ರವರಿಂದ ಆಸ್ತಿಗಳನ್ನು ಖರೀದಿಸಿರುತ್ತಾರೆ. ಬೆಟ್ಟಾಚಾರ್ ರವರು ಸಿದ್ದಾಚಾರ್ ರವರಿಂದ ಖರೀದಿ ಮಾಡಿರುತ್ತಾರೆ. ಬೆಟ್ಟಾಚಾರ್ ರವರು ಸಿದ್ದಾಚಾರ್ ರವರಿಂದ ಮತ್ತು ಪುಟ್ಟಬಸವಾಚಾರಿಯವರು ಬೆಟ್ಟಾಚಾರ್ ರವರಿಂದ ಖರೀದಿಸಿದ ಕ್ರಯ ಪತ್ರಗಳನ್ನು ನ್ಯಾಕ್ಕೆ ಹಾಜರುಮಡಲು ತೊಂದರೆ ಇದೆಯೇ ಎಂದರೆ ಸಾಕ್ಷಿಯು ಈಗಾಗಲೇ ಹಾಜರು ಮಾಡಿದ್ದೇವೆ ಎಂದು ಹೇಳುತ್ತಾರೆ. ಯಾವುದೇ ದಾಖಲೆಗಳನ್ನು ಹಾಜರು ಮಾಡದೇ ಇದ್ದರೂ ಸಹ ವಾದಿಗಳ ಆಸ್ತಿಯನ್ನು ಲಪಟಾಯಿಸುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾಸ್ತಿಯ ನಂ. **31/1** ರ ಪೂರ್ವ, ಪಶ್ಚಿಮ ಮತ್ತು ಉತ್ತರಕ್ಕೆ ರಸ್ತೆಗಳಿವೆ ಎಂದರೆ ಸರಿ. ದಾವಾಸ್ತಿಯ ಉತ್ತರಕ್ಕೆ ಬಿ.ಎಂ.ರಸ್ತೆಯಿದ್ದು, ಎದುರಿಗೆ ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣ ಇದೆ ಎಂದರೆ ಸರಿ. ದಾವಾಸ್ವತ್ತಿನ ಮೂರು ಕಡೆಗಳಲ್ಲಿ ರಸ್ತೆ ಇರುವುದರಿಂದ ಅದು ವಾಣಿಜ್ಯ ಯೋಗ್ಯವಾಗಿರುವ ಸ್ಥಳವಾಗಿರುತ್ತದೆ ಎಂದರೆ ಸರಿ. ಆದ್ದರಿಂದ ವಾದಿಗಳ ಆಸ್ತಿಯನ್ನು ಲಪಟಾಯಿಸುವ ಉದ್ದೇಶದಿಂದ ನಾನು, ಗಂಗಾಧರಚಾರಿ, ಮಹದೇವ ಮತ್ತು ಲೋಕೇಶ ದಾವಾಸ್ತಿಗಳನ್ನು ಹೊಡೆದುಕೊಳ್ಳುವ ಹುನ್ನಾರ ನಡೆಸಿದ್ದೇವೆ ಎಂದರೆ ಸರಿಯಲ್ಲ.

ತಕರಾರಿನಲ್ಲಿ ಏನು ವಿಚಾರಗಳು ಬರೆದಿವೆ ಎಂದು ಗೊತ್ತಿಲ್ಲ ಎಂದರೆ ಸರಿ. ತಕರಾರನ್ನು ಸಲ್ಲಿಸಲು ನೀವು ನಿಮ್ಮ ವಕೀಲರಿಗೆ ಮಾಹಿತಿಯನ್ನು ಕೊಟ್ಟಿಲ್ಲ ಎಂದರೆ ಸಾಕ್ಷಿಯು ನಾನು ತಕರಾರನ್ನು ನೀಡಿಲ್ಲ. ವಾದಿಗಳೇ

ತಕರಾರನ್ನು ನೀಡಿದ್ದಾರೆ ಎಂದು ಹೇಳುತ್ತಾರೆ. ದಾವಾಸ್ತಿಗಳಲ್ಲಿ ನನಗೆ ಯಾವುದೇ ಹಕ್ಕು, ಸ್ವಾಧೀನ ಇಲ್ಲದೇ ಇದ್ದರೂ ಸಹ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇದೆ.

ಪ್ರಧಾನ ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಹುಣಸೂರು.